***ಓ.ಎಸ್.ನಂ.214/2015***
***ಪಿ.ಡಬ್ಲ್ಯೂ-1***

***ದಿಃ 18-06-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

***ಪಾಟೀ ಸವಾಲುಃ ಪ್ರತಿವಾದಿ ಪರ*** ಶ್ರೀ ಕೆ ಎಲ್ ಆರ್ ***ವಕೀಲರಿಂದ.***

ಪ್ರತಿವಾದಿ ತ್ಯಾಗದಬಾವಿ ಲಿಂಗದಹಳ್ಳಿ ಹೋಬಳಿಯಲ್ಲಿ ಸುಮಾರು *10* ವರ್ಷಗಳಿಂದ ವಾಸ ಮಾಡುತ್ತಿದ್ದಾರೆ. ನಾನು ಗೊಂಡೇದಹಳ್ಳಿ ಗ್ರಾಮದಲ್ಲಿ ವಾಸ ಮಾಡುತ್ತಿದ್ದೇನೆಂದರೆ ಸರಿ. ನನ್ನ ತಂದೆ ಜೀವಿತ ಕಾಲದಲ್ಲಿ ಅವರಿಗೆ *1* ಎಕರೆ ಜಮೀನು ನೀಡಿರುತ್ತೇವೆ. ನನಗೆ ಮತ್ತು ಪ್ರತಿವಾದಿಗೆ ಪ್ರತೀ *2* ಎಕರೆ ಬಂದಿತ್ತು. ನನ್ನ ತಂದೆ ತೀರಿದ ಮೇಲೆ ಅವರಿಗೆ ಇದ್ದ *1* ಎಕರೆ ಜಮೀನಿನ ಪೈಕಿ ಅರ್ಧ-ಅರ್ಧ ಜಮೀನನ್ನು ನಾನು ಮತ್ತು ಪ್ರತಿವಾದಿ ತೆಗೆದುಕೊಂಡೆವು ಎಂದರೆ ಸರಿ. ಅದೇ ರೀತಿ ಮನೆಯನ್ನೂ ಸಹ ನಾನು ಮತ್ತು ಪ್ರತಿವಾದಿ ಅರ್ಧ-ಅರ್ಧ ಹಿಸ್ಸೆ ಮಾಡಿಕೊಂಡೆವು ಎಂದರೆ ಸರಿ. ದಿಃ *12-02-1974* ರಿಂದ ನಾವು ಬೇರೆ ಬೇರೆ ವಾಸವಿರುತ್ತೇವೆಂದರೆ ಸರಿ. ಅಂದಿನಿಂದ ನಮ್ಮ ಹಿಸ್ಸೆಗೆ ಬಂದ ಜಮೀನಿನಲ್ಲಿ ನಾವು ಆದಾಯ ಪಡೆಯುತ್ತಿದ್ದು, ಪ್ರತಿವಾದಿ ತಮ್ಮ ಜಮೀನಿನ ಆದಾಯ ಪಡೆಯುತ್ತಾರೆಂದರೆ ಸರಿ. ನನ್ನ ತಂದೆಯ ಜಮೀನಿನಲ್ಲಿ ಬರುವಂತಹ ಆದಾಯವನ್ನು ನಾನು ಮತ್ತು ಪ್ರತಿವಾದಿ ಪಡೆಯುತ್ತಿದ್ದೇವೆಂದರೆ ಸರಿ. ಗೊಂಡೇದಹಳ್ಳಿ ಗ್ರಾಮದಲ್ಲಿರುವ ಆಸ್ತಿಗಳು ನಮ್ಮ ಪಿತ್ರಾರ್ಜಿತ ಆಸ್ತಿಗಳೆಂದರೆ ಸರಿ. ತ್ಯಾಗದಬಾವಿ ಗ್ರಾಮದಲ್ಲಿರುವ ಆಸ್ತಿಗಳು ಪ್ರತಿವಾದಿಗೆ ಸಾಗುವಳಿ ಚೀಟಿಯ ಮೂಲಕ ಬಂದಿರುವಂತಹ ಆಸ್ತಿಗಳೆಂದರೆ ಸರಿ.

( ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಿ ಮುಂದೂಡಲಾಯ್ತು)

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***
***ಪ್ರ.ದ.ನ್ಯಾ.ದಂ. ರವರು, ತರೀಕೆರೆ.***